All India Radio: Bangalore
National Bulletins In Kannada
ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

19.07.2025 : 7.35 AM

********

ಮುಖ್ಯಾಂಶಗಳು

1. **ದಕ್ಷಿಣ ಕೊರಿಯಾ ಸಂಸದೀಯ ನಿಯೋಗ ಭೇಟಿಯಾದ ಲೋಕಸಭಾಧ್ಯಕ್ಷ ಓಂ ಬಿರ್ಲಾ; ಭಯೋತ್ಪಾದನೆ ವಿರುದ್ಧ ಶೂನ್ಯ ಸಹಿಷ್ಣುತೆಗೆ ಒತ್ತು**
2. **ದೇಶದ ಮೊದಲ ಸ್ಥಳೀಯ ಸೆಮಿಕಂಡಕ್ಟರ್ ಚಿಪ್ ಇದೇ ವರ್ಷ ಬಿಡುಗಡೆ - ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಘೋಷಣೆ**
3. **ವಾರಾಣಸಿಯಲ್ಲಿ ಇಂದಿನಿಂದ ಯುವ ಆಧ್ಯಾತ್ಮಿಕ ಸಮ್ಮೇಳನ ಆರಂಭ**
4. **ಪಾಲ್ಯಾಕ್ ಇಮ್ರೆ - ವರ್ಗಾ ಜಾನೋಸ್ ಸ್ಮಾರಕ ಕುಸ್ತಿ ಪಂದ್ಯಾವಳಿ; ಎರಡು ಚಿನ್ನ ಸೇರಿ ನಾಲ್ಕು ಪದಕ ಗೆದ್ದ ಭಾರತದ ವನಿತೆಯರು**
5. **ಫಿಡೆ ಮಹಿಳಾ ಚೆಸ್ ವಿಶ್ವಕಪ್; ನಾಲ್ವರು ಭಾರತೀಯ ಆಟಗಾರ್ತಿಯರು ಕ್ವಾರ್ಟರ್ ಫೈನಲ್ ಪ್ರವೇಶ**

******

ನವದೆಹಲಿಯಲ್ಲಿ ನಿನ್ನೆ ಲೋಕಸಭಾಧ್ಯಕ್ಷ ಓಂ ಬಿರ್ಲಾ, ದಕ್ಷಿಣ ಕೊರಿಯಾ ಮಾಜಿ ಪ್ರಧಾನಿ ಕಿಮ್ ಬೂ ಕ್ಯೂಮ್ ಅವರ ನೇತೃತ್ವದ ಸಂಸದೀಯ ನಿಯೋಗವನ್ನು ಭೇಟಿಯಾಗಿ ಮಾತುಕತೆ ನಡೆಸಿದರು. ಈ ಸಂದರ್ಭದಲ್ಲಿ ಓಂ ಬಿರ್ಲಾ, ಭಯೋತ್ಪಾದನೆ ವಿರುದ್ಧ ಭಾರತದ ಶೂನ್ಯ ಸಹಿಷ್ಣುತಾ ನೀತಿಯನ್ನು ಪುನರುಚ್ಛರಿಸಿದ್ದಾರೆ. ಲೋಕಸಭಾಧ್ಯಕ್ಷರು ಸಂಸದೀಯ ನಿಯೋಗಕ್ಕೆ ಆಪರೇಷನ್ ಸಿಂಧೂರ್ ಕುರಿತು ವಿವರಿಸಿದ್ದು, ಭಾರತ ಭಯೋತ್ಪಾದಕ ಮೂಲಸೌಕರ್ಯವನ್ನು ನಾಶಪಡಿಸಲು ಹಾಗೂ ಬೆದರಿಕೆಯನ್ನು ತಡೆಗಟ್ಟುವ ಉದ್ದೇಶದಿಂದ ನಿಖರ ದಾಳಿ ನಡೆಸಿದೆ ಎಂದಿದ್ದಾರೆ. ಇದೇ ವೇಳೆ ಅವರು ಭಾರತದ ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಕೊರಿಯಾದ ನಿರಂತರ ಬೆಂಬಲದ ಕುರಿತು ವಿಶ್ವಾಸ ವ್ಯಕ್ತಪಡಿಸಿದರು. ಪಹಲ್ಗಾಮ್ ಭಯೋತ್ಪಾದಕ ದಾಳಿಯನ್ನು

ಖಂಡಿಸಿರುವ ದಕ್ಷಿಣ ಕೊರಿಯಾ ಮತ್ತು ಇತ್ತೀಚೆಗೆ ನಡೆದ ಅಹಮದಾಬಾದ್ ವಿಮಾನ ದುರಂತದ ಕುರಿತು ಸಂತಾಪ ವ್ಯಕ್ತಪಡಿಸಿದ ಕೊರಿಯಾ ಸಂಸತ್ತಿನ ಸಭಾಧ್ಯಕ್ಷರ ಕುರಿತು ಶ್ಲಾಘನೆ ವ್ಯಕ್ತಪಡಿಸಿದರು.

******

ಈ ವರ್ಷ ದೇಶದ ಮೊದಲ ಸ್ಥಳೀಯ ಸೆಮಿಕಂಡಕ್ಟರ್ ಚಿಪ್ ಅನ್ನು ಬಿಡುಗಡೆ ಮಾಡಲಾಗುವುದು ಎಂದು ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ. ಹೈದರಾಬಾದ್‌ನಲ್ಲಿ ನಿನ್ನೆ ನಡೆದ ಕೇಶವ್ ಮೆಮೋರಿಯಲ್ ಎಜುಕೇಷನಲ್ ಸೊಸೈಟಿಯ ೮೫ ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಮಾತನಾಡಿದ ಸಚಿವರು, ಭಾರತ, ವಿಶ್ವದ ಪ್ರಮುಖ ಸೆಮಿಕಂಡಕ್ಟರ್ ರಾಷ್ಟ್ರಗಳಲ್ಲಿ ಒಂದಾಗಲಿದೆ ಎಂದು ಹೇಳಿದರು. ಸರ್ಕಾರ ಈಗಾಗಲೇ ಆರು ಸೆಮಿಕಂಡಕ್ಟರ್ ಸ್ಥಾವರಗಳನ್ನು ಅನುಮೋದಿಸಿದ್ದು, ಅವುಗಳ ನಿರ್ಮಾಣ ಕಾರ್ಯ ಸಾಗುತ್ತಿದೆ ಎಂದ ಅವರು, ಈ ವರ್ಷ ದೇಶದಲ್ಲಿ ಮೊದಲ ಮೇಡ್ ಇನ್ ಇಂಡಿಯಾ ಚಿಪ್ ಇರುತ್ತದೆ ಎಂದು ತಿಳಿಸಿದರು. ಭಾರತದ ಕೃತಕ ಬುದ್ಧಿಮತ್ತೆ- ಎಐ ಯೋಜನೆಯ ಭಾಗವಾಗಿ, ಉಚಿತ ಡೇಟಾಸೆಟ್‌ಗಳು ಸೇರಿದಂತೆ ಅಗತ್ಯ ತಂತ್ರಜ್ಞಾನವನ್ನು ಅಪ್‌ಲೋಡ್ ಮಾಡಲಾಗುತ್ತಿದೆ ಎಂದು ಸಚಿವರು ಹೇಳಿದರು. ಎಐ ಬಳಕೆ ಕುರಿತು ಸುಮಾರು ಒಂದು ಮಿಲಿಯನ್ ಜನರಿಗೆ ತರಬೇತಿ ನೀಡಲಾಗುತ್ತಿದೆ ಎಂದು ಅವರು ಹೇಳಿದರು. ೨೦೪೭ ರ ವೇಳೆಗೆ ಭಾರತ, ವಿಶ್ವದ ಎರಡು ಅಗ್ರ ಆರ್ಥಿಕತೆಗಳಲ್ಲಿ ಒಂದಾಗಲಿದೆ. ವೇಗವಾಗಿ ಬದಲಾಗುತ್ತಿರುವ ಜಾಗತಿಕ ಆರ್ಥಿಕತೆ ಮತ್ತು ತಾಂತ್ರಿಕತೆಯ ಹಿನ್ನೆಲೆಯಲ್ಲಿ, ತಂತ್ರಜ್ಞಾನವನ್ನು ಉತ್ತಮವಾಗಿ ಬಳಸಿಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು. ಮುಂಬರುವ ದಿನಗಳಲ್ಲಿ ಅಭಿವೃದ್ಧಿ ಹೊಂದಿದ ದೇಶಗಳ ವಿದ್ಯಾರ್ಥಿಗಳು ಶೈಕ್ಷಣಿಕ ಅವಕಾಶಗಳಿಗಾಗಿ ಭಾರತಕ್ಕೆ ಬರಲಿದ್ದಾರೆ ಎಂದು ಅವರು ಹೇಳಿದರು.

******

ಕೇಂದ್ರ ಸರ್ಕಾರ ಗ್ರೀನ್ ಹೈಡ್ರೋಜನ್ ಉತ್ಪಾದನೆ ಕುರಿತು ಸಂಶೋಧನೆ ಹಾಗೂ ಉತ್ಪಾದನೆಗೆ ಸಂಬಂಧಿಸಿದ ಹಾಗೆ ೨೦ ಸಾವಿರ ಕೋಟಿ ರೂಪಾಯಿ ಅನುದಾನ ನೀಡಿದ್ದು, ಹೈಡ್ರೋಜನ್ ಹಾಗೂ ಎಲೆಕ್ಟ್ರೋಲೈಸರ್ ಉತ್ಪಾದನೆಗೆ ಒತ್ತು ನೀಡಲಾಗಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ

ತಿಳಿಸಿದ್ದಾರೆ. ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ಗ್ರೀನ್ ಹೈಡ್ರೋಜನ್ ಫೆಸಿಲಿಟಿ ಘಟಕಕ್ಕೆ ನಿನ್ನೆ ಭೇಟಿ ನೀಡಿ, ಮಾತನಾಡಿದ ಅವರು, ಬಯೋಮಾಸ್‌ನಿಂದ ಗ್ರೀನ್ ಹೈಡ್ರೋಜನ್ ಉತ್ಪಾದನಾ ವೆಚ್ಚ ಕಡಿಮೆಗೊಳಿಸಿ, ಸಂಗ್ರಹಣಾ ವ್ಯವಸ್ಥೆಯಲ್ಲಿರುವ ಸಮಸ್ಯೆಗಳನ್ನು ಪರಿಹರಿಸಿದರೆ ಅದನ್ನು ವಾಣಿಜ್ಯ ಬಳಕೆಗೆ ತರಲು ಸರ್ಕಾರ ಪ್ರಯತ್ನಿಸಲಿದೆ ಎಂದು ಹೇಳಿದರು. ಸೂರ್ಯನ ಬೆಳಕಿನ ಮೂಲಕ ವಿದ್ಯುತ್ ಉತ್ಪಾದನೆಗೆ ಉಪಯೋಗಿಸುವ ಪಾಲಿಸಿಲಿಕಾನ್ ಅನ್ನು ಇದೀಗ ಆಮದು ಮಾಡಲಾಗುತ್ತಿದ್ದು, ಭಾರತೀಯ ವಿಜ್ಞಾನ ಸಂಸ್ಥೆಯ ವಿಜ್ಞಾನಿಗಳು ಪೆರೆಸ್ಕೈಟ್ ಎನ್ನುವ ತಂತ್ರಜ್ಞಾನವನ್ನು ಸಂಶೋಧಿಸುವಲ್ಲಿ ಲ್ಯಾಬ್ ಮಟ್ಟದಲ್ಲಿ ಯಶಸ್ವಿಯಾಗಿದ್ದಾರೆ ಎಂದು ಸಚಿವ ಪ್ರಲ್ಹಾದ್ ಜೋಶಿ ತಿಳಿಸಿದ್ದಾರೆ.

****ಧ್ವನಿ***ಪ್ರಲ್ಹಾದ್ ಜೋಶಿ

******

ಸಂಸತ್ತಿನ ಮಳೆಗಾಲದ ಅಧಿವೇಶನ ಬರುವ ಸೋಮವಾರದಿಂದ ಆರಂಭವಾಗಲಿದೆ. ಇದಕ್ಕೂ ಮುನ್ನ ಕೇಂದ್ರ ಸರ್ಕಾರ ನಾಳೆ ಸರ್ವಪಕ್ಷ ಸಭೆ ಕರೆದಿದೆ. ಈ ಸಭೆಯಲ್ಲಿ, ಸಂಸತ್ತಿನ ಎರಡೂ ಸದನಗಳ ಸುಗಮ ಕಾರ್ಯನಿರ್ವಹಣೆಯನ್ನು ಖಚಿತಪಡಿಸಿಕೊಳ್ಳಲು, ಸರ್ಕಾರ ಎಲ್ಲಾ ರಾಜಕೀಯ ಪಕ್ಷಗಳಿಂದ ಸಹಕಾರ ಕೋರಲಿದೆ. ಇದೇ ೨೧ ರಿಂದ, ಮುಂದಿನ ತಿಂಗಳ ೨೧ ರವರೆಗೆ ಮಳೆಗಾಲದ ಅಧಿವೇಶನ ನಡೆಯಲಿದೆ. ಅಧಿವೇಶನದಲ್ಲಿ, ಹಲವಾರು ಪ್ರಮುಖ ಶಾಸನಗಳನ್ನು ಚರ್ಚೆ ಮತ್ತು ಅಂಗೀಕಾರಕ್ಕಾಗಿ ಕೈಗೆತ್ತಿಕೊಳ್ಳಲು ನಿರ್ಧರಿಸಲಾಗಿದೆ.

******

ಮಾದಕ ವ್ಯಸನದ ವಿರುದ್ಧ, ಸಾಮೂಹಿಕ ರಾಷ್ಟ್ರೀಯ ಸಂಕಲ್ಪ ಕೈಗೊಳ್ಳುವ ಗುರಿ ಹೊಂದಿರುವ, ಎರಡು ದಿನಗಳ ಯುವ ಆಧ್ಯಾತ್ಮಿಕ ಸಮ್ಮೇಳನ ವಾರಾಣಸಿಯಲ್ಲಿ ಇಂದಿನಿಂದ ಪ್ರಾರಂಭವಾಗಲಿದೆ. ವಿಕಸಿತ ಭಾರತಕ್ಕಾಗಿ, ವಿನಾಶ ಮುಕ್ತ ಯುವಸಮೂಹ' ಎಂಬ ವಿಷಯ ಕೇಂದ್ರೀಕೃತ ಕಾರ್ಯಕ್ರಮವನ್ನು, ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯ ಆಯೋಜಿಸುತ್ತಿದೆ. ಕೇಂದ್ರ ಸಚಿವರಾದ ಡಾ. ಮನ್ಸುಖ್ ಮಾಂಡವಿಯಾ, ಗಜೇಂದ್ರ ಸಿಂಗ್ ಶೇಖಾವತ್, ಡಾ.

ವೀರೇಂದ್ರ ಕುಮಾರ್, ಹಿಮಾಚಲ ಪ್ರದೇಶದ ರಾಜ್ಯಪಾಲ ಶಿವ ಪ್ರತಾಪ್ ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ.

******

ನ್ಯಾಯಮೂರ್ತಿ ಯಶವಂತ್ ವರ್ಮಾ ಅವರ ನಿವಾಸದಲ್ಲಿ ದೊಡ್ಡ ಪ್ರಮಾಣದಲ್ಲಿ ನಗದು ಹಣ ಪತ್ತೆಯಾದ ನಂತರ ಅವರನ್ನು ಮಹಾಭಿಯೋಗದ ಮೂಲಕ ಪದಚ್ಯುತಿಗೊಳಿಸುವ ಕುರಿತು ಎಲ್ಲಾ ರಾಜಕೀಯ ಪಕ್ಷಗಳ ಒಮ್ಮತವಿದೆ ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಹೇಳಿದ್ದಾರೆ. ಸುದ್ದಿ ಸಂಸ್ಥೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಅವರು, ಈ ವಿಷಯ ಪ್ರಸ್ತಾಪಿಸಿದ್ದು, ವಿವಿಧ ರಾಜಕೀಯ ಪಕ್ಷಗಳ ಹಿರಿಯ ನಾಯಕರೊಂದಿಗೆ ಈ ಪ್ರಕರಣದ ಕುರಿತು ಚರ್ಚೆ ನಡೆಸಲಾಗಿದೆ. ಕೇಂದ್ರ ಸರ್ಕಾರ ಕೇವಲ ಏಕ ಸದಸ್ಯ ಹೊಂದಿರುವ ರಾಜಕೀಯ ಪಕ್ಷವನ್ನೂ ಬಿಡದಂತೆ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಈ ವಿಷಯ ಚರ್ಚಿಸಲಾಗುವುದು.

******

ಬಿಹಾರದಲ್ಲಿ ವಿಶೇಷ ತೀವ್ರ ಪರಿಷ್ಕರಣೆ- ಎಸ್.ಐ.ಆರ್ ಅಭಿಯಾನದಡಿ ಇದುವರೆಗೆ ಏಳು ಕೋಟಿ ೪೮ ಲಕ್ಷಕ್ಕೂ ಹೆಚ್ಚು ಎಣಿಕೆ ನಮೂನೆಗಳನ್ನು ಸಂಗ್ರಹಿಸಲಾಗಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ. ಒಟ್ಟು ಎಣಿಕೆ ನಮೂನೆಗಳಲ್ಲಿ ಇದು ಶೇಕಡ ೯೪.೬೮ ರಷ್ಟಾಗಿದೆ. ಭರ್ತಿ ಮಾಡಿದ ಎಣಿಕೆ ನಮೂನೆಗಳನ್ನು ಸಲ್ಲಿಸಲು ಕೇವಲ ಶೇಕಡ ೫.೨ ರಷ್ಟು ಮತದಾರರು ಮಾತ್ರ ಉಳಿದಿದ್ದು, ಅವರಲ್ಲಿ ಹಲವರು ಮುಂದಿನ ದಿನಗಳಲ್ಲಿ ದಾಖಲೆಗಳೊಂದಿಗೆ ತಮ್ಮ ಎಣಿಕೆ ನಮೂನೆಗಳನ್ನು ಸಲ್ಲಿಸಲು ಸಮಯ ಕೋರಿದ್ದಾರೆ ಎಂದು ಚುನಾವಣಾ ಆಯೋಗ ತಿಳಿಸಿದೆ.

******

ಅಂತಾರಾಷ್ಟ್ರೀಯ ಸಮುದ್ರ ಗಡಿ ರೇಖೆ ದಾಟಿ, ಬಾಂಗ್ಲಾ ಪ್ರಾದೇಶಿಕ ನೀರಿನಲ್ಲಿ ಮೀನುಗಾರಿಕೆ ನಡೆಸುತ್ತಿದ್ದ ಆರೋಪದ ಮೇಲೆ ಮೂವತ್ತನಾಲ್ಕು ಭಾರತೀಯ ಮೀನುಗಾರರನ್ನು, ಬಾಂಗ್ಲಾ ಅಧಿಕಾರಿಗಳು ಬಂಧಿಸಿದ್ದಾರೆ. ಮೀನುಗಾರರ ಸುರಕ್ಷಿತ ಬಿಡುಗಡೆಗೆ ಸಂಬಂಧಿಸಿದಂತೆ, ಬಾಂಗ್ಲಾದೇಶದಲ್ಲಿರುವ ಭಾರತೀಯ ಧೂತಾವಾಸ ಕಚೇರಿ, ರಾಜತಾಂತ್ರಿಕ ಮಾರ್ಗಗಳ ಮೂಲಕ,

ಬಾಂಗ್ಲಾದೇಶ ಅಧಿಕಾರಿಗಳೊಂದಿಗೆ ಚರ್ಚಿಸಿದೆ ಎಂದು ವಿದೇಶಾಂಗ ಸಚಿವಾಲಯದ ಮೂಲಗಳು ತಿಳಿಸಿವೆ.

******

ಹಂಗೇರಿಯ ಬುಡಾಪೆಸ್ಟ್‌ನಲ್ಲಿ ನಿನ್ನೆ ನಡೆದ ಪಾಲಿಯಾಕ್ ಇಮ್ರೆ ಮತ್ತು ವರ್ಗಾ ಜಾನೋಸ್ ಸ್ಮಾರಕ ಪಂದ್ಯಾವಳಿಯಲ್ಲಿ ಭಾರತೀಯ ಮಹಿಳಾ ಕುಸ್ತಿಪಟುಗಳು ಎರಡು ಚಿನ್ನ, ಒಂದು ಬೆಳ್ಳಿ ಮತ್ತು ಕಂಚಿನ ಪದಕಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ಒಲಿಂಪಿಯನ್ ಆಂಟಿಮ್ ಪಂಗಲ್ ಮತ್ತು ಹರ್ಷಿತಾ ಚಿನ್ನದ ಪದಕಗಳನ್ನು ಮುಡಿಗೇರಿಕೊಂಡಿದ್ದಾರೆ. ೫೩ ಕೆಜಿ ವಿಭಾಗದ ಫೈನಲ್‌ನಲ್ಲಿ, ಆಂಟಿಮ್ ರಷ್ಯಾದ ನಟಾಲಿಯಾ ಮಾಲಿಶೇವಾ ಅವರನ್ನು ೭-೪ ಅಂತರದಿಂದ ಸೋಲಿಸಿದರು. ಹರ್ಷಿತಾ ೭೨ ಕೆಜಿ ವಿಭಾಗದ ಅಂತಿಮ ಸುತ್ತಿನಲ್ಲಿ, ನಾಲ್ಕು ಬಾರಿಯ ಏಷ್ಯನ್ ಚಾಂಪಿಯನ್ ಕಜಕಿಸ್ತಾನದ ಝುಮಿಲಾ ಬಕ್‌ಬರ್ಗೆನೋವಾ ಅವರನ್ನು ೧೦-೦ ಅಂತರದಿಂದ ಮಣಿಸುವ ಮೂಲಕ ಚಿನ್ನದ ಪದಕಕ್ಕೆ ಕೊರಳೊಡ್ಡಿದರು. ನೇಹಾ ಸಾಂಗ್ವಾನ್ ೫೭ ಕೆಜಿ ವಿಭಾಗದಲ್ಲಿ, ಮಾಜಿ ಒಲಿಂಪಿಕ್ ಚಾಂಪಿಯನ್ ಅಮೆರಿಕದ ಹೆಲೆನ್ ಮರೋಲಿಸ್ ವಿರುದ್ಧ  ೪-೦ ಅಂತರದಿಂದ ಸೋತು, ಬೆಳ್ಳಿಗೆ ತೃಪ್ತಿಪಡಬೇಕಾಯಿತು.ಮಹಿಳೆಯರ ೫೦ ಕೆಜಿ ವಿಭಾಗದಲ್ಲಿ, ನೀಲಂ ಅವರು ಬೆಲರೂಸಿಯನ್ ಕುಸ್ತಿಪಟು, ಕ್ಸೆನಿಯಾ ಸ್ಟ್ಯಾಂಕೆವಿಚ್ ಅವರನ್ನು ಸೋಲಿಸಿ, ಕಂಚಿನ ಪದಕ ಗೆದ್ದರು.

ಇದರೊಂದಿಗೆ ನಾಳೆ ಕೊನೆಗೊಳ್ಳುವ ಬುಡಾಪೆಸ್ಟ್ ಕೂಟದಲ್ಲಿ ಭಾರತದ ಒಟ್ಟು ಪದಕಗಳ ಸಂಖ್ಯೆ ಆರಕ್ಕೆ ಏರಿಕೆಯಾಗಿದೆ.

******

ಜಾರ್ಜಿಯಾದ ಬಟುಮಿಯಲ್ಲಿ ನಡೆಯುತ್ತಿರುವ ಫಿಡೆ ಮಹಿಳಾ ಚೆಸ್ ವಿಶ್ವಕಪ್‌ನಲ್ಲಿ ಭಾರತದ ಗ್ರ್ಯಾಂಡ್ ಮಾಸ್ಟರ್‌ಗಳಾದ ಕೊನೇರು ಹಂಪಿ, ಹರಿಕಾ ದ್ರೋಣವಲ್ಲಿ, ಆರ್. ವೈಶಾಲಿ ಹಾಗೂ ಅಂತಾರಾಷ್ಟ್ರೀಯ ಮಾಸ್ಟರ್ ದಿವ್ಯಾ ದೇಶ್‌ಮುಖ್, ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದಾರೆ. ಆ ಮೂಲಕ ಟೂರ್ನಿಯ ಇತಿಹಾಸದಲ್ಲಿ ಕೊನೆಯ ೮ರ ಘಟ್ಟದಲ್ಲಿ ನಾಲ್ಕು ಆಟಗಾರರನ್ನು ಹೊಂದಿದ ಮೊದಲ ರಾಷ್ಟ್ರ ಎಂಬ ಹೆಗ್ಗಳಿಕೆಗೆ ಭಾರತ ಪಾತ್ರವಾಗಿದೆ. ಭಾರತದ ನಾಲ್ಕೂ ಆಟಗಾರರು ನಿನ್ನೆ ನಡೆದ ತಮ್ಮ ತಮ್ಮ ಟೈ ಬ್ರೇಕ್ ಪಂದ್ಯಗಳಲ್ಲಿ ಗೆಲುವು ಸಾಧಿಸಿ ಕ್ವಾರ್ಟರ್ ಫೈನಲ್ ಹಂತ

ಪ್ರವೇಶಿಸಿದರು. ಕೊನೆಯ ಲರ ಘಟ್ಟದಲ್ಲಿ ನಾಲ್ಕು ಸ್ಥಾನಗಳನ್ನು ಗಳಿಸಿರುವ ಭಾರತದ ವನಿತೆಯರು ಚೀನಾದೊಂದಿಗೆ ಪ್ರಶಸ್ತಿಗಾಗಿ ಹಾಗೂ ಅಗ್ರ ಮೂರು ಸ್ಥಾನಕ್ಕಾಗಿ ಸೆಣಸಾಟ ನಡೆಸಲಿದ್ದಾರೆ. ಈ ಟೂರ್ನಿಯಲ್ಲಿ ಅಗ್ರ ಮೂರು ಸ್ಥಾನಗಳಲ್ಲಿ ಬರುವ ಆಟಗಾರರು ಮಹಿಳಾ ಕ್ಯಾಂಡಿಡೇಟ್ಸ್ ಪಂದ್ಯಾವಳಿಗೆ ಅರ್ಹತೆ ಗಿಟ್ಟಿಸಿಕೊಳ್ಳಲಿದ್ದು, ಆ ಪಂದ್ಯಾವಳಿಯಲ್ಲಿ ಗೆಲುವು ಸಾಧಿಸುವ ಆಟಗಾರ್ತಿ ಮುಂದಿನ ಮಹಿಳಾ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಸ್ಥಾನ ಪಡೆಯುವ ಅವಕಾಶ ಹೊಂದಿದ್ದಾರೆ.

******

ಚತ್ತೀಸ್‌ಗಢದ ನಾರಾಯಣಪುರ ಜಿಲ್ಲೆಯಲ್ಲಿ ಭದ್ರತಾ ಪಡೆಗಳು ನಡೆಸಿದ ಕಾರ್ಯಾಚರಣೆಯಲ್ಲಿ ಆರು ಮಾವೋವಾದಿಗಳು ಹತರಾಗಿದ್ದಾರೆ. ಈ ಕುರಿತು ಮಾಹಿತಿ ನೀಡಿರುವ ಬಸ್ತಾರ್ ವಲಯದ ಪೊಲೀಸ್ ವರಿಷ್ಠಾಧಿಕಾರಿ ಪಿ. ಸುಂದರರಾಜ್, ಅಬೂಜ್‌ಮಡ್ ಪ್ರದೇಶದ ಅರಣ್ಯದಲ್ಲಿ ಭದ್ರತಾ ಪಡೆಗಳು ಹಾಗೂ ಪೊಲೀಸರು ನಡೆಸಿದ ಮಾವೋವಾದಿ ವಿರೋಧಿ ಜಂಟಿ ಕಾರ್ಯಾಚರಣೆಯಲ್ಲಿ ಮಾವೋವಾದಿಗಳೊಂದಿಗೆ ಗುಂಡಿನ ಚಕಮಕಿ ನಡೆದು, ಮಾವೋವಾದಿಗಳು ಹತರಾಗಿದ್ದಾರೆ ಎಂದು ತಿಳಿಸಿದ್ದಾರೆ. ಮಾವೋವಾದಿಗಳಿರುವ ಖಚಿತ ಗುಪ್ತಚರ ಮಾಹಿತಿಯೊಂದಿಗೆ ಈ ಕಾರ್ಯಾಚರಣೆ ನಡೆಸಲಾಯಿತು. ಈವರೆಗೆ ಕಾರ್ಯಾಚರಣೆ ಸ್ಥಳದಿಂದ ಒಟ್ಟು ಆರು ಮಾವೋವಾದಿಗಳ ಮೃತದೇಹಗಳನ್ನು ಹಾಗೂ ಎಕೆ-೪೭ ಸೇರಿದಂತೆ ದೊಡ್ಡ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ. ಸುತ್ತಮುತ್ತಲಿನ ಪ್ರದೇಶದಲ್ಲಿ ತೀವ್ರ ಶೋಧ ಕಾರ್ಯಾಚರಣೆ ಮುಂದುವರಿದಿದೆ.

******